**ಸಾಕ್ಷಿಗೆ ದಿನಾಂಕ : *27-09-2024* ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು: *1* ನೇ ಎದುರುದಾರರು ತಮ್ಮ ತಕರಾರನ್ನು ಸಲ್ಲಿಸದೇ ಇರುವುದರಿಂದ, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಪಾಟೀ ಸವಾಲು: ಎದುರುದಾರ ನಂ.2 ರವರ ಪರ ಶ್ರೀ. ಸಿ. ಬಿ. ಎಸ್ ವಕೀಲರಿಂದಃ**

ನನ್ನ ಗಂಡ ಮನೆಯಿಂದ ವಾಹನಕ್ಕೆ ಪೆಟ್ರೋಲ್ ಹಾಕಿಸಿಕೊಂಡು ಬರಲು ಹೊರಗಡೆ ಹೊರಟ್ಟಿದ್ದರು. ಮೋಟರ್ ಸೈಕಲ್ ವಾಹನವು ಹುನಗುಂದ ಕಡೆಗೆ ಬರುತ್ತಿತ್ತು. ನನ್ನ ಗಂಡ ಹುನಗುಂದ ಕಡೆಗೆ ಹೋಗುವ ರಸ್ತೆಯಲ್ಲಿ ಹೋಗುತ್ತಿದ್ದರು. ನನ್ನ ಗಂಡ ಮುಂದೆ ಹೊರಟಿದ್ದಾಗ ಮೋಟರ್ ಸೈಕಲ್ ಹಿಂದೆ ಬರುತ್ತಿತ್ತು ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಹುನಗುಂದಕ್ಕೆ ಹೋಗುವಾಗ ಬಲಗಡೆ ನಯಾರ ಪೆಟ್ರೋಲ್ ಬಂಕ್ ಇರುತ್ತದೆ. ನನ್ನ ಗಂಡ ಪೆಟ್ರೋಲ್ ಹಾಕಿಸಲು ಎಡಗಡೆಯಿಂದ ಬಲಗಡೆಗೆ ಹೊರಟಿದ್ದರು. ನನ್ನ ಗಂಡ ಎಡಗಡೆಯಿಂದ ಬಲಗಡೆಗೆ ಒಮ್ಮಲೆ ತಿರುಗಿದ್ದರಿಂದ, ಅಪಘಾತವು ಸಂಭವಿಸಿರುತ್ತದೆ. ಟಿ.ವಿ.ಎಸ್ ವಾಹನವು ನಮ್ಮ ಮನೆಯಲ್ಲಿ ಇತ್ತು ಮತ್ತು ಅದನ್ನು ನನ್ನ ಗಂಡ ಉಪಯೋಗಿಸುತ್ತಿದ್ದರು. ಟಿ.ವಿ.ಎಸ್ ವಾಹನಕ್ಕೆ ವಿಮೆ ಇರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನ್ನ ಗಂಡನ ಡಿ.ಎಲ್ ಇರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ಅಪಘಾತವು ನನ್ನ ಗಂಡನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಪರಿಹಾರ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತಪಡಿಸಿದ ಯಾವುದೇ ಗಾಯಗಳಾಗಿರುವುದಿಲ್ಲ. ನನ್ನ ಗಂಡನನ್ನು ಮೊದಲು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ನಂತರ ಅಲ್ಲಿಂದ ಬಾಗಲಕೋಟೆ ಕೆರೂಡಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಕೆರೂಡಿ ಆಸ್ಪತ್ರೆಯಲ್ಲಿ 3 ದಿನಗಳ ಕಾಲ ದಾಖಲಾಗಿದ್ದರು. ನನ್ನ ಮೂರು ದಿನಗಳ ಕಾಲ ಕೆರೂಡಿ ಆಸ್ಪತ್ರೆಯಲ್ಲಿ ದಾಖಲಾಗಿರುವ ಬಗ್ಗೆ ಯಾವುದೇ ದಾಖಲೆಯನ್ನು ಸಲ್ಲಿಸಿರುವುದಿಲ್ಲ. ಬಾಗಲಕೋಟೆ ಕೆರೂಡಿ ಆಸ್ಪತ್ರೆಯಿಂದ ಬೆಳಗಾವಿಯ ಆರ್ಮಿ ಆಸ್ಪತ್ರೆಗೆ ನನ್ನ ಗಂಡನನ್ನು ಕರೆದುಕೊಂಡು ಹೋಗಿದ್ದೇವು. ಬೆಳಗಾವಿಯಲ್ಲಿ ತೋರಿಸಿದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಬೆಳಗಾವಿಯಲ್ಲಿ ತೋರಿಸಿದಾಗ

ಗುಣಮುಖರಾಗಲಿಲ್ಲ ಮತ್ತು ನನ್ನ ಗಂಡ ಅಲ್ಲಿಯೇ ತೀರಿಕೊಂಡಿರುತ್ತಾರೆ. ಸಾಕ್ಷಿದಾರರು ಮುಮದುವರೆದು ನನ್ನ ಗಂಡನನ್ನು ಬೆಳಗಾವಿ ಯಿಂದ ಕರೆದುಕೊಂಡು ಬರುವಾಗ ನಾಗನೂರ ಕ್ರಾಸ್ ಹತ್ತಿರ ತೀರಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ನನ್ನ ಗಂಡ ದಿನಾಂಕ: 10-11-2022 ರಂದು ತೀರಿಕೊಂಡಿರುವುದಕ್ಕೂ ಮತ್ತು ಈ ಅಪಘಾತಕ್ಕೂ ಯಾವುದೇ ಸಂಬಂಧವಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ನಿವೃತ್ತ ಸೈನಿಕ ಎಂದು ಯಾವುದೇ ದಾಖಲೆಯನ್ನು ಸಲ್ಲಿಸಿರುವುದಿಲ್ಲ. ನನ್ನ ಗಂಡನಿಗೆ ರೂ.26,000/- ತಿಂಗಳಿಗೆ ನಿವೃತ್ತ ಪಿಂಚಣಿ ಬರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸ್ ದಾಖಲೆಯಲ್ಲಿ ನನ್ನ ಗಂಡ ಕೃಷಿ ಕೆಲಸ ಮಾಡುತ್ತಾರೆ ಎಂದು ನಮೂದಿಸಿರುತ್ತಾರೆ ಎಂದರೆ ಸಾಕ್ಷಿದಾರರು ಆರ್ಮಿಯಿಂದ ನಿವೃತ್ತಿಯಾದ ನಂತರ ಕೃಷಿ ಕೆಲಸ ಮಾಡುತ್ತಿದ್ದರು ಎಂದು ಹೇಳುತ್ತಾರೆ. ಜಮೀನಿಗೆ ಸಂಬಂಧಪಟ್ಟ ಉತಾರೆಯನ್ನು ಹಾಜರುಪಡಿಸಿರುವುದಿಲ್ಲ. ನನ್ನ ಗಂಡನಿಗೆ 57 ವರ್ಷ ವಯಸ್ಸಾಗಿತ್ತು. 2 ರಿಂದ 4 ನೇ ಅರ್ಜಿದಾರರು ಮದುವೆಯಾಗಿ ಅವರ ಗಂಡನ ಮನೆಯಲ್ಲಿರುತ್ತಾರೆ. ನನ್ನ ಗಂಡನ ವಾರಸಾ ಪ್ರಮಾಣ ಪತ್ರವನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ಅಪಘಾತವು ನನ್ನ ಗಂಡನ ತಪ್ಪಿನಿಂದ ಆಗಿದ್ದು, ಪರಿಹಾರದ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ಹೆಲ್ಮೇಟ್ ಉಪಯೋಗ ಮಾಡುತ್ತಿರಲಿಲ್ಲ. 1 ನೇ ಎದುರುದಾರರ ಡಿ.ಎಲ್ ಇರದೇ ಇರುವದರಿಂದ, 2 ನೇ ಎದುರುದಾರರು ಪರಿಹಾರವನ್ನು ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ)

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹುನಗುಂದ.